**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**C.C No.47/2025**

| | | |
|---|---|---|
| ಸಾಕ್ಷಿದಾರರ ಹೆಸರು | : ವಿಶ್ವನಾಥ ಕರ್ಜಗಿಮಠ | ***P.W-3*** |
| ತಂದೆಯ ಹೆಸರು | : ಮಲ್ಲಿಕಾರ್ಜುನ | ***C.W-2*** |
| ವಯಸ್ಸು | : 39 ವರ್ಷ | |
| ಉದ್ಯೋಗ | : ಆಟೋ ಚಾಲಕ | |
| ವಾಸ | : ರಾಣೆಬೆನ್ನೂರು | |

**ದಿನಾಂಕಃ 04-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ಸಾಕ್ಷಿಗೆ ಒಂದು ದಾಖಲೆ ತೋರಿಸಲಾಗಿ ಅದು ಪಂಚನಾಮೆ ಆಗಿದ್ದು ಅದನ್ನು ಈಗಾಗಲೇ ನಿಪಿ-2 ಮತ್ತು 4 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಮತ್ತು ನಿಪಿ-4(ಸಿ) ಎಂದು ಗುರುತಿಸಲಾಯಿತು. ಸದ್ರಿ ಸಹಿಗಳನ್ನು ಮಂಗಳಾ ಸೀಡ್ಸ್ ಅಂಗಡಿ ಹತ್ತಿರ 6 ತಿಂಗಳ ಹಿಂದೆ ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-3, 5, 6 ಭಾವಚಿತ್ರಗಳಲ್ಲಿ ನಾನು ಇರುತ್ತೇನೆ. ಸದ್ರಿ ಫೋಟೋಗಳನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿ ಅವರು ಪಾಟೀ ಸವಾಲಿಗೆ ಅನುಮತಿಯನ್ನು ಕೋರಿದ್ದು, ಸದರಿ ಮನವಿಯನ್ನು ಅಂಗೀಕರಿಸಲಾಗಿದೆ.)

**ಪಾಟೀ ಸವಾಲುಃ ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ದಿನಾಂಕ 19-10-2024 ರಂದು ರಾಣೆಬೆನ್ನೂರು ಹಳೇ ಪಿಬಿ ರಸ್ತೆಯ ಫಿರ್ಯಾದಿ ಅಂಗಡಿಯ ಮುಂದೆ ನನ್ನ ಹಾಗೂ ಚಾಸಾ-3 ಇವರ ಸಮಕ್ಷಮ ಗಲಾಟೆಗೆ ಸಂಬಂಧಿಸಿದಂತೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ಸದ್ರಿ ಸಮಯದಲ್ಲಿ ನಿಪಿ-3 ರಂತೆ ಫೋಟೋ ತೆಗೆದಿರುತ್ತಾರೆ ಎಂದರೆ ಸರಿ ಅಲ್ಲ. ಆರೋಪಿತರು ಚಾಸಾ-1 ಇವರನ್ನು

ಕರೆದುಕೊಂಡು ಹೋದ ಜಾಗ ಗಂಗಾಪುರ ರೈಲ್ವೆ ಗೇಟ್ ಹತ್ತಿರ ನಿಪಿ-4 ರಂತೆ ನನ್ನ ಹಾಗೂ ಚಾಸಾ-3 ಇವರ ಸಮಕ್ಷಮ ಮಹಜರು ಮಾಡಿ ನಿಪಿ-5, 6 ಫೋಟೋ ತೆಗೆದಿರುತ್ತಾರೆ ಎಂದರೆ ಸರಿ ಅಲ್ಲ. ಪಂಚನಾಮೆ ಹಾಗೂ ಭಾವಚಿತ್ರದ ಬಗ್ಗೆ ಮಾಹಿತಿ ಇದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಪಾಟೀ ಸವಾಲುಃ**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.